ಕೇಂದ್ರಗಳು ನಡೆಸಿದ ಹುನ್ನಾರಗಳೇನು? ಇಂತಹ ಪ್ರಶ್ನೆಗಳಿಗೆ ಪಾಡ್ದನಗಳ ಸಾಂಸ್ಕೃತಿಕ ವಿಮರ್ಶೆಯ ಮೂಲಕ ಉತ್ತರ ಕಂಡುಕೊಳ್ಳಲು ಯತ್ನಿಸಲಾಗಿದೆ ಎಂದು ಹೇಳುತ್ತಾರೆ.

ಈ ತಾತ್ವಿಕತೆಯ ತಿಳಿವಿನಲ್ಲಿ ಪಾಡ್ದನಗಳನ್ನು ನೋಡುತ್ತಾರೆ. ಇದರಿಂದ ಕೆಳ ಸಮುದಾಯಗಳು ಸೃಷ್ಟಿಸಿದ ಈ ಪಾಡ್ದನಗಳು ಚರಿತ್ರೆಯ ಇನ್ನೊಂದು ಆಯಾಮವನ್ನು ಚಲನಶೀಲಗೊಳಿಸುತ್ತವೆ. ತುಳು ನಾಡಿನ ಪ್ರಮುಖ ಜನಪದರ ಆಚರಣೆಯಾದ ದೈವಾರಾಧನೆಯಲ್ಲಿ ಪಾಡ್ದನಗಳು ಪ್ರದರ್ಶನ ಪಠ್ಯಗಳಾಗುತ್ತವೆ. ಕೋಟೆದ ಬಬ್ಬು ಬಾರಗ, ತನ್ನಿಮಾನಿಗ, ಮದನಗ, ಬಳಜೇಯಿ ಮಾನಿಗ, ಬಾಲೆ ಮಾಡೆದಿ, ದೇವು ಪೂಂಜ, ಬಬ್ಬರ್ಯ, ಮೈಸಂದಾಯ, ಆಲಿಭೂತ ಮತ್ತು ಕಾಂತಾ ಬಾರೆ ಬೂದ ಬಾರೆ ಪಾಡ್ದನಗಳನ್ನು ಗಮನಿಸಿ, ಇವುಗಳ ನೀತಿಸಂಹಿತೆಯನ್ನು ವಿಶ್ಲೇಷಿಸಿದ್ದಾರೆ. ತುಳು ಭಾಷೆಯಲ್ಲಿರುವ ಪಾಡ್ದನಗಳನ್ನು ವಿಷಯ ವಿಶ್ಲೇಷಣೆಗೆ ಪೂರಕವಾಗಿ ಕನ್ನಡಕ್ಕೆ ಅನುವಾದಿಸಿಕೊಟ್ಟಿದ್ದಾರೆ. ಇದು ತುಳು ಬಾರದವರಿಗೆ ಉಪಯುಕ್ತವಾಗಿದೆ. ಈ ಪಾಡ್ದನಗಳು ಬಿಚ್ಚಿಡುವ ಲೋಕಸತ್ಯ ನಿಜಕ್ಕೂ ವಿಸ್ಮಯಕಾರಿಯಾಗಿವೆ.

ಪಾಡ್ದನಗಳ ಭಾಷೆ, ಲಯ, ಹಾಡುಗಳನ್ನು ಕಟ್ಟುವ ವಿನ್ಯಾಸ ಅವು ಬೀರುವ ಪರಿಣಾಮವನ್ನು ವಿಶೇಷವಾಗಿ ವಿಶ್ಲೇಷಿಸಿದ್ದಾರೆ. ಕಲ್ಕುಡ-ಕಲ್ಲುರ್ಟಿ ಪಾಡ್ದನದಲ್ಲಿ ಮೂರು ಪಾತ್ರಗಳು ಬರುತ್ತವೆ. ಕಲ್ಕುಡ ಅವನ ತಂಗಿ ಕಲ್ಲುರ್ಟಿ ಮತ್ತು ಭೈರವ ಸೂಡ ಅರಸ. ಕಲ್ಕುಡ ಶಿಲ್ಪ ಕಲೆಯನ್ನು ಕೆತ್ತುವವನು. ಭೈರವ ಸೂಡ ಅರಸ ಕಲ್ಕುಡನಿಂದ ಕೆತ್ತನೆ ಕೆಲಸ ಮಾಡಿಸಿಕೊಂಡು ಕೂಲಿ ಕೇಳಿದರೆ ಆತನ ಕೈ ಮತ್ತು ಕಾಲುಗಳನ್ನು ಕತ್ತರಿಸಲಾಯಿತೆಂದು ಪಾಡ್ದನದಲ್ಲಿ ಕಥೆ ಬರುತ್ತದೆ. ಈ ಕಥನವನ್ನು ಜನಪದರು ಯಾಕೆ ಕಟ್ಟಿದರು? ಅದರ ಸಾಂಸ್ಕೃತಿಕ ವಿನ್ಯಾಸ ಕುರಿತು ಚಿನ್ನಪ್ಪ ಗೌಡರು ಚಿಂತಿಸಿದ್ದಾರೆ. ಇಂತಹ ಪಾಡ್ದನಗಳನ್ನು ದುಡಿಯುವ ವರ್ಗ ಸೃಷ್ಟಿಸಿದೆ. ಇವುಗಳನ್ನು ಚಿನ್ನಪ್ಪ ಗೌಡರು 'ಶ್ರಮ ಸಂಸ್ಕೃತಿಯ' ನೆಲೆಯಲ್ಲಿ ನಿಂತು ನೋಡುತ್ತಾರೆ. ಈ ರೀತಿಯ ನೋಟಗಳು ಚರಿತ್ರೆಯನ್ನು ನೋಡುವ ದೃಷ್ಟಿಕೋನಗಳನ್ನು ಬದಲಿಸುತ್ತವೆ.

'ತುಳುವಿನ ಅಜ್ಜಿ ಕಥೆಗಳು' ಲೇಖನದಲ್ಲಿ ಈ ಕಥೆಗಳ ಸಾಂಸ್ಕೃತಿಕ ಸಂರಚನೆಯನ್ನು ವಿಶ್ಲೇಷಿಸಿದ್ದಾರೆ. ಅವರೇ ತುಳುವಿನಲ್ಲಿ ರಚನೆಯಾದ ನೂರಾರು ಅಜ್ಜಿ ಕಥೆಗಳನ್ನು ಸಂಗ್ರಹಿಸಿದ್ದಾರೆ. ತುಳುನಾಡಿನ ಗ್ರಾಮಗಳನ್ನು ತಿರುಗಿ ಕಥೆಗಳನ್ನು ಸಂಗ್ರಹಿಸಿರುವುದು ವಿದ್ವಾಂಸರ ಘನತೆಯನ್ನು ಹೆಚ್ಚಿಸಿದೆ. ಜೊತೆಗೆ ಇಂಗ್ಲಿಷಿಗೂ ಅನುವಾದಿಸಿದ್ದಾರೆ. ಈ ಕಥೆಗಳ ನೀತಿ ಮತ್ತು ಪರಿಣಾಮಗಳನ್ನು ಬದುಕಿನ ಸಂವೇದನೆ ನೆಲೆಯಲ್ಲಿ ನೋಡಿದ್ದಾರೆ. ಈ ಕಥೆಗಳ ಭಾಷೆಯ ಸ್ವರೂಪ, ನಿರೂಪಣೆಯ ವಿಧಾನ, ತಂತ್ರದ ವಿನ್ಯಾಸವನ್ನು ವಿಶೇಷವಾಗಿ ಗಮನಿಸಿದ್ದಾರೆ.

'ಕೆಲಸ ಮತ್ತು ಕುಣಿತದ ಹಾಡುಗಳು' ಹೆಣ್ಣು ಮತ್ತು ನೆಲ-ಕನಸುಗಳ ಮೆರವಣಿಗೆ ಲೇಖನವು ದುಡಿವ ಮಹಿಳೆಯರ ದಲಿತ ಜಗತ್ತಿನ ಸಂವೇದನೆಗಳನ್ನು ಸಾಮಾಜಿಕ ಭಿತ್ತಿಯಲ್ಲಿ ನೋಡುತ್ತದೆ. ಕೆಲಸದ ಹಾಡುಗಳು ಬದುಕಿನ ಸಂಭ್ರಮವನ್ನು ಪ್ರತಿನಿಧಿಸಿದರೆ, ಕುಣಿತದ ಹಾಡುಗಳು ಪ್ರತಿರೋಧ ಮತ್ತು ಪ್ರತಿಭಟನೆಯನ್ನು ಪ್ರತಿನಿಧಿಸುತ್ತವೆ. ಈ ಹಾಡುಗಳು ಕೆಳಸಮುದಾಯದಲ್ಲಿರುವ ಸಂಭ್ರಮ ಮತ್ತು ಪ್ರತಿರೋಧದ ಆಶಯಗಳನ್ನು ಹೇಗೆ ಕಟ್ಟಿಕೊಡುತ್ತವೆ ಎಂಬುದನ್ನು ಚಿಂತಿಸಿದ್ದಾರೆ. ಈ ಹಾಡುಗಳಲ್ಲಿ ಬರುವ ರೂಪಕ, ಸಂಕೇತ, ಪ್ರತಿಮೆ ಮತ್ತು ಸಂದೇಶಗಳನ್ನು ಮನೋ ವಿಶ್ಲೇಷಣಾತ್ಮಕ ನೆಲೆಯಲ್ಲಿ ಮಾಡಿದ್ದಾರೆ. 'ಮಹಿಳೆಯರು, ರೈತರು, ಕಾರ್ಮಿಕರು, ಮೊದಲಾದ ಅಲಕ್ಷಿತ ಸಮುದಾಯಗಳು ಇತಿಹಾಸಗಳನ್ನು ಕಟ್ಟಲು, ಮರು ಕಟ್ಟಲು ಕವಿತೆಗಳು ಮತ್ತು ದುಡಿವ ಹಾಡುಗಳು ಉಪಯುಕ್ತ' ಎಂದು ಅವುಗಳ ಮಹತ್ವವನ್ನು ಕುರಿತು ಚರ್ಚಿಸಿದ್ದಾರೆ. ತುಳುನಾಡಿನಲ್ಲಿ ಇಂತಹ ಬಹುಸಂಖ್ಯಾತ ಹಾಡುಗಳಿವೆ. ಈ ಹಾಡುಗಳ ಸಂಗ್ರಹಕಾರ್ಯ ಇನ್ನೂ ನಡೆಯಬೇಕಾಗಿದೆ. ಅವುಗಳ ಸ್ವರೂಪವನ್ನು ಇನ್ನಷ್ಟು ಅರ್ಥ ಮಾಡಿಕೊಳ್ಳಬೇಕಿದೆ ಎನ್ನುತ್ತಾರೆ.

'ಉಳ್ಳಾಲ್ತಿ: ಪರಂಪರೆ ಇತಿಹಾಸ ಕಥನ' ಎಂಬ ಲೇಖನದಲ್ಲಿ ಉಳ್ಳಾಲ್ತಿ ಹೆಣ್ಣು ದೈವದ ವಿಶಿಷ್ಟತೆಯನ್ನು ನಿರೂಪಿಸಿದ್ದಾರೆ. ಉಳ್ಳಾಲ್ತಿ ದೈವವನ್ನು ಆರಾಧನೆ ಮಾಡುತ್ತಾರೆ. ಈಕೆ ಅರಸು ಮನೆತನಕ್ಕೆ ಸೇರಿದ್ದು ಸಾಮಾಜಿಕವಾದ ನಿಯಮಗಳನ್ನು ಉಲ್ಲಂಘಿಸಿ